ಕಾಣಬೇಕು. ಅದೂ ಇದೂ ಬಿಟ್ಟು ಇಲ್ಲದ್ದ ಬೇಕ ಅಂದ್ರ ಎಲ್ಲಿಂದ ಬಂದಿತು?' ಎಂದು ಹೇಳಿ ಕೈಜಾಡಿಸಿದ್ದ. ಓರಗಿತ್ತಿಯ ಮಗಳು ಸಪನಾ, ಜಾನಕಿಯ ಮೊಬೈಲ್ ತೆಗೆದುಕೊಂಡು ಮೊಬೈಲ್ ಗೇಮ್‌ನಲ್ಲಿ ತಲ್ಲೀಣಳಾದಾಗ ಮೊಬೈಲ್ ಕೈಯಿಂದ ಜಾರಿ ಕೆಳಗೆ ಬಿದ್ದಿತು. 'ಅಯ್ಯ ದರಿದ್ರದ್ದ ಆಟಾ ಆಡಾಕತ್ತಿ, ತಳಗ ಚೆಲ್ಲಿದೆಲ್ಲಲೆ...' ಎಂದು ಜಾನಕಿ ಕೋಪದಲ್ಲಿ ಒಂದೇಟು ಕೊಟ್ಟದದನ್ನು ನೋಡಿದ ಓರಗಿತ್ತಿ ರಾಜವ್ವ ಸಿಟ್ಟಿನಿಂದಲೇ, 'ನೀ ಆಕಿದ್ಯಾಕ ತುಗೊಳ್ಳಾಕ ಹೋಗಿದ್ದೆ? ಎಂದು ಬೈದಳು.

'ನಮ್ಮವ್ವಾ ಮನ್ಯಾಗ ರಗಡ ಮೊಬೈಲ್ ಅದಾವು...' ಎಂದು ಮುಂದಾಗುವ ಜಗಳವನ್ನು ತಡೆಹಿಡಿಯಲು ಮಧ್ಯಸ್ಥಿಕೆ ವಹಿಸಿದ ಅತ್ತೆ, 'ಸಣ್ಣ ಮಕ್ಕಳು ಅವಕ್ಕ ಏನ ತಿಳಿತೈತಿ? ಅವರ ಕೈಯಾಗ ನೀ ಕೊಡಬಾರದವ್ವಾ... ಎಂದು ಸಮಾಧಾನ ಪಡಿಸುವ ಯತ್ನ ಮಾಡಿದಳು. ಆಗ 'ಆಕಿಗೇನ ಗೊತ್ತು ಸಣ್ಣ ಮಕ್ಕಳು ಅಂತ? ಆಕಿ ಮಕ್ಕಳನ್ನ ಹಡದಿದ್ರ ಗೊತ್ತಾಕ್ಕಿತ್ತು' ಎನ್ನುವ ಓರಗಿತ್ತಿಯ ಮಾತು ಜಾನಕಿಗೆ ಬರೆ ಎಳೆದಂತಾಗಿತ್ತು.

ಹೊರಗಡೆ ಹೋದಲ್ಲೆಲ್ಲಾ ಆಕೆಯ ಕೊರತೆಯನ್ನೇ ಆಡಿಕೊಳ್ಳುವ ಜನ. ಹೀಗಾಗಿ ಹೊರಗೆ ಹೋಗುವುದೇ ಬೇಡವೆನ್ನಿಸಿ ಇತ್ತೀಚೆಗೆ ತನಗೆ ಬೇಸರವಾದಾಗ ಪಕ್ಕ ದಲ್ಲಿಯೇ ಇರುವ ಗ್ರಾಮ ಪಂಚಾಯತಿ ಗ್ರಂಥಾಲಯಕ್ಕೆ ಹೋಗುವುದನ್ನು ರೂಢಿಸಿ ಕೊಂಡಿದ್ದಳು. ಈ ದಿನ ಆಕೆಗೊಂದು ಜಾನಪದ ಸಾಹಿತ್ಯದ ಪುಸ್ತಕ ದೊರೆತು ಪುಟ ತೆರೆದಾಗ,

ಬಾಲಕರಿಲ್ಲದ ಬಾಲೀದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದ್ಹ್ಯಂಗ ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗ...

ಪದದ ಸಾಲುಗಳು ಅವಳಲ್ಲಿ ವೇದನೆಯನ್ನು ಹುಟ್ಟಿಸಿದವು.

★ ★ ★

ಜಾನಕಿ ಹೊತ್ತ ಹನ್ನೆರಡು ದೇವರ ಹರಕೆಗಳಲ್ಲಿ ಯಾವ ದೇವರು ಕಣ್ಣು ತೆರೆದು ಫಲ ನೀಡಿತ್ತೊ! ಒಂದೂವರೆ ತಿಂಗಳಿನಿಂದ ಮುಟ್ಟಾಗಿರಲಿಲ್ಲ. ದಿನ ಕಳೆದಂತೆ ನಂಬುಗೆ ಗಟ್ಟಿಗೊಳ್ಳತೊಡಗಿತ್ತು. ಏನಾದರಾಗಲಿ ಎಂದು ಪರೀಕ್ಷೆಗೋಸ್ಕರ ಆಸ್ಪತ್ರೆಗೆ ನಡೆದರು. ಜಾನಕಿಯ ಎದೆ ಢವಗುಟ್ಟತೊಡಗಿತು. ಸಾಕಷ್ಟು ಶ್ರಮಪಟ್ಟು ಹಗಲು ರಾತ್ರಿ ಎನ್ನದೆ ನಿದ್ದೆಗೆಟ್ಟು ಓದಿ ಪರೀಕ್ಷೆ ಎದುರಿಸಿ ಫಲಿತಾಂಶವನ್ನು ನಿರೀಕ್ಷಿಸಿದಂತಾ ಗಿತ್ತು. ಡಾಕ್ಟರು ಬೆಡ್ ಮೇಲೆ ಮಲಗಿಸಿ ಸ್ಕ್ಯಾನ್ ಮಾಡತೊಡಗಿದಾಗ ಏನೋ ಉದ್ವೇಗ, ಆತಂಕ! ಸ್ಕ್ರೀನ್‌ನಲ್ಲಿ ಮೂಡುತ್ತಿದ್ದ ಗೆರೆಗಳು... ಏನೇನೂ ಅರ್ಥವಾಗ ಲಿಲ್ಲ ಅವಳಿಗೆ. ಐದಾರು ನಿಮಿಷ ಪರೀಕ್ಷಿಸಿದ ಡಾಕ್ಟರು 'ಹು...' ಎಂದಾಗಲೇ ಅರ್ಧ ಧೈರ್ಯ ಬಂದಿತ್ತು. ಕಂಗ್ರಾಟ್ಸ್ ಹೇಳಿದಾಗಂತಲೂ ಹಿಡಿಸಲಾರದಷ್ಟು ಸಂತಸ! ಅತ್ತೆಗೆ ತಾವು ಹೊತ್ತ ದೊಡ್ಡ ಹೊರೆಯೊಂದು ಕೆಳಗಿಳಿದಂತಾಗಿ ನಿರಾಳವಾಗಿ ತಮಗಿದ್ದ ಒಂದೇ ಒಂದು ಚಿಂತೆ ದೂರವಾದಂತಾಗಿತ್ತು.

ಚೈತ್ರ ಚಿಗುರೊಡೆದಿತ್ತು. ಮಾಮರದ ಚಿಗುರು, ಕೋಗಿಲೆಯ ಕಾರುಬಾರು ಜೋರಾಗಿತ್ತು. ವಸಂತ ನಿಸರ್ಗಕ್ಕೆ ಬಣ್ಣವೆರಚಿದ್ದ. ಪ್ರತಿಸಲದಂತೆಯೇ ಈ ಸಂಕಷ್ಟಿಗೆ ಊರ ಹೊರಗಿನ ಗಣಪತಿ ದೇವಾಲಯಕ್ಕೆ ಓರಗಿತ್ತಿಯರೆಲ್ಲ ಸೇರಿ ಹೊರಟಿದ್ದರು. ಊರು ದಾಟಿದ ಮೇಲೆ ರಸ್ತೆಯ ಎರಡೂ ಬದಿಗಿರುವ ಮಾಮರಗಳಾಗಲೇ ಮಿಡಿಗಾಯಿಗಳನ್ನು ಹೊತ್ತು ಕಂಗೊಳಿಸುತ್ತಿದ್ದವು.

ಪ್ರತಿ ತಿಂಗಳಿಗಿಂತ ಈ ತಿಂಗಳು ಅಲ್ಲಿನ ಪರಿಸರ ಭಿನ್ನವಾಗಿ ಜಾನಕಿಗೆ ಕಂಡಿತ್ತು. ಮನದಲ್ಲಿ ಸಂತೋಷ ಸಮಾಧಾನಗಳಿದ್ದಲ್ಲಿ ಜಗತ್ತೆಲ್ಲವೂ ಸುಂದರವಂತೆ! ಹಾಗಾಗಿತ್ತವಳಿಗೆ. ಓರಗಿತ್ತಿ 'ಈಗ ಮಾವಿನ ಮಿಡಿ ಬಿಟ್ಟಾವ ನೋಡ. ಅದೇನ ಹೇಳತಾರಲ್ಲಾ... ಗುಡಿ ಹುಣ್ಣವಿಗೆ ಗುಂಡಗಾಯಿ, ಹೋಳಿಹುಣ್ಣವಿಗೆ ಹೋಳಗಾಯಿ ಅಗತ್ಯವಾಗಿ ಬೇಕು' ಅಂತ ಎಂದಾಗ, ಜಾನಕಿ ಮರದಲ್ಲಿನ ಮಾವಿನ ಮಿಡಿಗಳನ್ನು ದಿಟ್ಟಿಸಿದಳು. ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಭ್ರೂಣ ಕೂಡ ಇಷ್ಟೇ ಗಾತ್ರದ್ದಾಗಿರಬಹುದೆ ಎಂದುಕೊಳ್ಳುತ್ತ ತನ್ನ ಗರ್ಭಕ್ಕೆ ಮಾವಿನ ಮಿಡಿಯನ್ನು ಹೋಲಿಸತೊಡಗಿ, ಮುಂದಿನ ತಿಂಗಳು ಮಿಡಿಗಳು ಕಾಯಿಗಳಾಗುವವು, ತನ್ನ ಭ್ರೂಣ ಕೂಡ ಸಾಕಷ್ಟು ಬೆಳೆಯುವುದೆಂದು ಸುಖಿಸಿದಳು.

ಐದು ತಿಂಗಳು ತುಂಬಿದ ನಂತರ ತವರವರು ಬಂದು ಹಸಿರು ಬಳೆ ತೊಡಿಸಿ, 'ಬಯಕಿ ಕಾಡತಾವ... ಪರಿಪರಿಲಿಂದ, ಬಯಕಿ ಕಾಡತಾವ' ಎಂದು ಬಸಿರು ಪದ ಹಾಡಿ ಕುಬ್ಬಸ ಮಾಡಿದರು. ದಿನದಿಂದ ದಿನಕ್ಕೆ ದೊಡ್ಡದಾಗುತ್ತಿದ್ದ ತನ್ನ ಹೊಟ್ಟೆ ಯನ್ನು ಹೆಮ್ಮೆಯಿಂದ ವೀಕ್ಷಿಸುತ್ತಿದ್ದಳು ಜಾನಕಿ. ಗೋಡೆಗೆ ಮುಖಮಾಡಿ ಗೋಡೆಗೆ ಅಂಟಿಕೊಂಡಿರುವ ಕ್ಯಾಲೆಂಡರನ್ನೊ, ಗಡಿಯಾರವನ್ನೊ ಅಥವಾ ಗೋಡೆಗೆ ನೇತುಹಾಕಿರುವ ಪತಿಯ ಡ್ರೆಸ್‌ಗಳನ್ನೋ ತೆಗೆದುಕೊಳ್ಳಬೇಕಾದಾಗ, ಆಕೆಯ ಹೊಟ್ಟೆ ಗೋಡೆಗೆ ತಗುಲಿ ತಾನು ತುಂಬಿದ ಬಸುರಿ ಎಂಬುದನ್ನು ಜ್ಞಾಪಿಸಿಕೊಂಡಾ ಗೊಮ್ಮೆ ಪುಳಕಿತಳಾಗುವವಳು. ಹೊಟ್ಟೆಯಲ್ಲಿ ಮೀಟಿದಂತಹ ಮಿಸುಕಾಡಿದಂತಹ ಅನುಭವ! ವಾಂತಿ ವಾಕರಿಕೆಯಿಂದ ಗಂಟಲೆಲ್ಲ ನೋವಾದರೂ ಅದೂ ಕೂಡ ಅವಳಿಗೆ ಸುಖವೆ!

ಅವಳಿಗೆ ಮಕ್ಕಳೇ ಆಗುವುದಿಲ್ಲ ಎಂದೆಲ್ಲ ಆಡಿಕೊಂಡು ನಕ್ಕವರ ಮುಂದೆ ತನ್ನ ಪರ್ವತ ಗಾತ್ರದ ಹೊಟ್ಟೆಯನ್ನು ಹೊತ್ತು ತೋರಿಸಿ ಗೆದ್ದೆನೆಂದು ವಿಜಯದ ನಗೆ ಬೀರುತ್ತಿದ್ದಳು! ಕುಳಿತಾಗ, ನಿಂತಾಗ– ಹಗಲು ರಾತ್ರಿಯೂ ಮಗುವಿನ ಕನಸು ಕಾಣತೊಡಗಿದಳು. ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುತ್ತ ತನ್ನದೇ ತದ್ರೂಪದ ಹೆಣ್ಣು ಕೂಸಿನ ಕಲ್ಪನೆಯಲ್ಲಿ ತೇಲುವಳು. ಹಾಲುಗೆನ್ನೆಯ ಹಸುಳೆ ಒಮ್ಮೆ ಅತ್ತಂತಾಗುವುದು, ಒಮ್ಮೆ ನಕ್ಕಂತಾಗುವುದು!

ಮಹಾಭಾರತದ ಅಭಿಮನ್ಯು ತಾಯಿಯ ಗರ್ಭದಲ್ಲಿಯೇ ಚಕ್ರವ್ಯೂಹ ಭೇದಿಸುವುದನ್ನು ಕಲಿತಿದ್ದನಂತೆ, ಹಾಗೆಯೇ ಗರ್ಭವತಿಯರು ಒಳ್ಳೆಯದನ್ನೇ ಆಲಿಸಬೇಕು, ನೋಡಬೇಕು ಎಂಬಂತಹ ನಂಬಿಕೆಗಳನ್ನು ಕೇಳಿ ತಿಳಿದ ಜಾನಕಿ, ಟಿ.ವಿ. ಯಲ್ಲಿಯ ಒಳ್ಳೊಳ್ಳೆಯ ಹಾಡು, ನೃತ್ಯ ವೀಕ್ಷಿಸತೊಡಗಿದಳು. ತಳಕುತ್ತಾ ಬಳಕುತ್ತಾ ತೆಳ್ಳನೆಯ ಬೆಳ್ಳನೆಯ ಬಾಲೆಯ ಭರತನಾಟ್ಯ ನೋಡುತ್ತಲೂ ಅವರಲ್ಲಿಯೂ ಕೂಡ ಹುಟ್ಟಲಿರುವ ತನ್ನ ಮಗಳನ್ನು ಕಂಡು ಸಂತಸಪಡುವಳು. ಮುಂದಿನ ಬದುಕಿನ ಆಶಾಗೋಪುರ ಕಟ್ಟುತ್ತಿದ್ದಳು.

ಅವಳು ಬಯಸಿದಂತೆ, ಕಂಡ ಕನಸಿನಂತೆ ಸುಂದರವಾದ ಹೆಣ್ಣುಮಗುವಿಗೆ ಜನ್ಮವಿತ್ತಳು. ಬಹಳ ದಿನಗಳ ನಂತರ ಹುಟ್ಟಿದ ಆ ಮಗು ಮನೆಯಲ್ಲಿ ಸಂಭ್ರಮದ ಅಲೆಯನ್ನೆ ಎಬ್ಬಿಸಿತು. ನಾಮಕರಣ ಶಾಸ್ತ್ರದ ತಯಾರಿ ಜೋರಾಗಿ ನಡೆಯಿತು. ಊರಿನಿಂದ ಎಲ್ಲರೂ ನಾಮಕರಣಕ್ಕೆ ಹಾಜರಾಗಿದ್ದರು. 'ಜಾನಿ ಮಗಳು ಚೆಂದುಳ್ಳ ಗೊಂಬಿ ಹಂಗ ಅದಾಳ ನೋಡ್ರಿ. ಭರತನಾಟ್ಯಕ್ಕೆ ಹೇಳಿಮಾಡಿಸಿದಂಗ ಮೈಮಾಟಾ... ಅಂದಂಗ ನಮ್ಮ ಜಾನೂ ಸಣ್ಣಾಕಿದ್ದಾಗ ಭಾಳ ಕುಣೀತಿದ್ಲು' ತವರವರ ಸಡಗರದ ಮಾತು. ಗುಂಪಿನಲ್ಲಿ ಯಾರೋ ಹೆಂಗಳೆಯರು, 'ಅಂದಾಂಗ ಕೂಸಿಗೆ ಏನಂತ ಹೆಸರ ಇಡತೀರಿ?' ಎಂದದ್ದಕ್ಕೆ ಜಾನಕಿಯ ಅತ್ತೆ, 'ನೋಡ್ರೆವಾ ಕರಿಯಾಕ ನೀವು ಏನರ ಇಟಗೋರಿ. ಆದ್ರ ಮೊದಲ ನಮ್ಮ ಅತ್ತಿ ಹೆಸರು ಮಾಯವ್ವಾ ಅಂತ ಇಟ್ಟ ಮುಂದಿನ ಹೆಸರ ಇಡ್ರಿ...' ಎಂದು ಆಜ್ಞೆಯ ಧ್ವನಿ ಹೊರಡಿಸಿದಳು. 'ಮೊದಲ ಮಾಯವ್ವಾ ಅಂತ ಇಟ್ಟ, ಮುಂದ ಮಯೂರಿ ಅಂತ ಇಡ್ರಿ' ಜಾನಕಿಯ ನಾದಿನಿ ಸೂಚಿಸಿದ ಹೆಸರು ಎಲ್ಲರಿಗೂ ಸಮ್ಮತಿಯಾಗಿ, ಹೌದು, ನಿನ್ನ ಮಗಳಿಗೆ ನಾಟ್ಯ ಮಯೂರಿ ಅಂತ ಇಡ್ರಿ' ಎಂದರು. ಸುಂದರವಾಗಿ ಸಿಂಗರಿಸಿದ ತೊಟ್ಟಿಲಲ್ಲಿ ಮಗುವನ್ನು ಹಾಕಿ ಸುತ್ತಲೂ ನೆರೆದ ಹೆಂಗಳೆಯರು, 'ಶೃಂಗಾರದ ಶ್ರೀಕೃಷ್ಣನ ಚೆಂದಾಗಿ ತೂಗಿರೆ... ಜೋ... ಜೋ...' ಎಂದು ಹಾಡಿದಾಗ ಆ ಹಾಡಿಗೆ ಪಕ್ಕ ವಾದ್ಯನೀಡುವಂತೆ 'ಜೋ ಜೋ ಎನ್ನ ಜೋಪಿಯ ಕಂದಾ ಜೋ ಜೋ' ಎನ್ನುತ್ತಿದ್ದರು. ಜಾನಕಿಯ ನಾದಿನಿ ಸಂಪ್ರದಾಯದ ಪ್ರಕಾರ, 'ಮಾಯವ್ವಾ... ಮಾಯವ್ವಾ... ಕುಕ್ಕರಿಗೆ ಕುರ್ರ, ಮಾಯವ್ವಾ... ಮಾಯವ್ವಾ... ಕುಕ್ಕರಿಗೆ ಕುರ್ರ' ಎನ್ನುತ್ತಿದ್ದಂತೆ ಎಲ್ಲರೂ ಆಕೆಯ ಬೆನ್ನಿಗೆ ನಯವಾಗಿ ಅಥವಾ ಬೇಕೆಂದೆ ಕೆಲವರು ಜೋರಾಗಿ ಬಡಿಯುತ್ತಿದ್ದರು.

ದಿನದಿನಕೆ ಬೆಳೆಯುವ ಹುಣ್ಣಿಮೆ ಚಂದ್ರನಂತೆ ಬೆಳೆಯತೊಡಗಿದ ಪೋರಿಯನ್ನು ಎಷ್ಟು ನೋಡಿದರೂ ಸಾಲದು. ಬಹಳ ದಿನಗಳ ಮೇಲೆ ಹುಟ್ಟಿದ ಆ ಮಗುವಿಗೆ ಎಲ್ಲಿಲ್ಲದ ಮಾನ್ಯತೆ! ಜಾನಕಿಯಂತೂ ತನ್ನ ಕಣ್ಣ ರೆಪ್ಪೆಗಿಂತಲೂ ಹೆಚ್ಚಾಗಿಯೇ ನೋಡಿಕೊಳ್ಳತೊಡಗಿದಳು. ಇವಳ ಅಕ್ಕರತೆಯನ್ನು ಕಂಡು ಅಸೂಯೆ ಅಸಹನೆಯಲ್ಲಿ ಕುದಿಯುತ್ತಿದ್ದ ಓರಗಿತ್ತಿಯರು, 'ಇಕಿ ಒಬ್ಬಕೆ ಮಗಳ್ನ ಕಂಡಾಳಾ, ನಾವು ಯಾರೂ ಹಡದೇ ಇಲ್ಲಾ ನೋಡು...' ಎಂದೆಲ್ಲ ಮೂದಲಿಸುವ ಮಟ್ಟಕ್ಕೆ ಜಾನಕಿಯ ಮಗಳ ಮೇಲಿನ ಪ್ರೀತಿ ಪರಾಕಾಷ್ಠೆಗೇರಿತ್ತು.

ಮಗಳು ತಪ್ಪು ಹೆಜ್ಜೆ ಇಡುತ್ತಲೇ ನಡೆದಾಡಿದಾಗಂತೂ ಜಾನಕಿಗೆ ಮುಗಿಲು ಮೂರೇಗೇಣು. ನಾಲ್ಕು ವರ್ಷ ತುಂಬುತ್ತಲೇ ತನ್ನ ಹೆಬ್ಬಯಕೆಯಂತೆ ಒಳ್ಳೆಯ ನೃತ್ಯ ಶಾಲೆಗೆ ಸೇರಿಸಿದಳು. ಮಯೂರಿ ಕೂಡ ಆಸಕ್ತಿಯಿಂದ ಭರತನಾಟ್ಯದಲ್ಲಿ ಪಳಗ ತೊಡಗಿದಳು. ಜಾನಕಿಯ ಹಾಗೂ ಮಯೂರಿಯ ಸತತ ಪ್ರಯತ್ನದಿಂದಲೇ ಮಯೂರಿ ತನ್ನ ಚಿಕ್ಕ ವಯಸ್ಸಿನಲ್ಲಿಯೇ ನಾಲ್ಕಾರು ಪ್ರಶಸ್ತಿಗಳನ್ನು ಬಾಚಿ ಕೊಂಡಿದ್ದಳು. ಇಂದು ಪತ್ರಿಕೆಯ ಅರಳು ಮಲ್ಲಿಗೆಯಲ್ಲಿಯೂ ಅರಳಿ ನಿಂತಿದ್ದಾಳೆ.

ಬಹಳ ದಿನಗಳ ಮೇಲೆ ಜಾನಕಿಯ ಸೋದರ ಅತ್ತೆಯ ಮಗ ಮನೋಹರ ಊರಿಗೆ ಬಂದಿದ್ದ. ಅವನ ಮುಂದೆ ಮಗಳ ವರ್ಣನೆ ಮಾಡುವುದೇನು? ಅವಳು ತಂದ ಬಹುಮಾನಗಳನ್ನು ಹಾಗೂ ಕಾರ್ಯಕ್ರಮಗಳ ಫೋಟೋ ತೋರಿಸುವು ದೇನು?... ನಡದೇ ಇತ್ತು. ಹಿತ್ತಲಲ್ಲಿ ಬಟ್ಟೆ ಒಣ ಹಾಕುವಾಗ ಒಬ್ಬಳೇ ಇರುವು ದನ್ನು ಕಂಡ ಮನೋಹರ ಅವಳತ್ತ ಧಾವಿಸಿ, 'ಜಾನಿ ಹ್ಯಾಂಗ ಅದೀಯ? ಅಂದ. 'ಇದ್ದ ಒಂದ ಚಿಂತಿ ದೂರಾಗಿ ಮಗಳ ಹುಟ್ಟಿದಳು. ಈಗಂತೂ ಅರಾಮ ನೋಡ ಮಾವಾ' ಅಂದಳು. 'ಮತ್ತ ಭಾಳ ದಿನಾ ಆತು ನೆನಪು ಆಗೂದಿಲ್ಲನ ಜಾನೂ?...' ಮಾತು ಪ್ರೀತಿಯಿಂದ ಆಕೆಯನ್ನು ತಬ್ಬಿಕೊಂಡಂತಿತ್ತು. 'ಮತ್ತ, ಮತ್ತೊಂದು ಕೂಸು ಬ್ಯಾಡನ ನಿನಗ?' ಎಂದು ಮಾವ ಅಂದಾಗ ನಾಚಿ ನೀರಾಗಿ ಕೆಂಪಾದ ಮುಖವನ್ನು ಮೇಲಕ್ಕೆ ಎತ್ತಲಾಗದೇ ಕೆಳಕ್ಕೆ ಮಾಡಿ ನೆಲವನ್ನೇ ನೋಡುತ್ತಾ ನಿಂತಳು.